





ಅಡಿಗಳಷ್ಟು ಉದ್ದ ಬೆಳೆದ ದಾಖಲೆಗಳಿವೆ.

ಅಮೆರಿಕನ್ ಈಲ್ ಮೀನುಗಳ ಆಹಾರ ಪದ್ಧತಿ ಕುತೂಹಲ ಕೆರಳಿಸುತ್ತದೆ. ಹಗಲಿನಲ್ಲಿ ಸಾಗರದ ಮಣ್ಣಿನೊಳಗೆ ಹೂತುಕೊಂಡಿರುವ ಈಲ್ ಮೀನುಗಳು ರಾತ್ರಿಯಲ್ಲಿ ಮಾತ್ರವೇ ಬೇಟೆಯಾಡುತ್ತವೆ. ಇವು ತೀರ ಪ್ರದೇಶದಲ್ಲಿ ಸತ್ತುಬೀಳುವ ಮೀನುಗಳು, ಕಶೇರುಕ ಮತ್ತು ಕೀಟಗಳನ್ನು ತಿನ್ನುವ ಮೂಲಕ ಪರಿಸರ ವ್ಯವಸ್ಥೆಯನ್ನು ಕಾಪಾಡುತ್ತವೆ. ಕೆಲವೊಮ್ಮೆ ಆಹಾರದ ಅಭಾವವುಂಟಾದಾಗ ಈ ಮೀನುಗಳು ಪರಸ್ಪರ ಒಂದನ್ನೊಂದು ತಿನ್ನುವುದೂ ಇದೆ.

## ಸಂತಾನೋತ್ಪತ್ತಿ

ಸಂತಾನೋತ್ಪತ್ತಿಗಾಗಿ ವಾಸಸ್ಥಳವನ್ನು ಬದಲಾಯಿಸುವುದು ಇವುಗಳ ಇನ್ನೊಂದು ವೈಶಿಷ್ಟ್ಯ. ಅದಕ್ಕೆಂದೇ ಅಟ್ಲಾಂಟಿಕ್ ಸಾಗರವನ್ನು ತಲುಪುವ ಈ ಮೀನುಗಳು, ಅಲ್ಲಿ ಮೊಟ್ಟೆಯಿಡುತ್ತವೆ. ಹತ್ತು ವಾರಗಳ ನಂತರ ಮೊಟ್ಟೆಗಳು ಒಡೆದು ಮರಿಗಳು ಹೊರಬಂದ ನಂತರ ಪುನಃ ತಮ್ಮ ವಾಸಸ್ಥಳಕ್ಕೆ ಮರಿಗಳೊಂದಿಗೆ ಹಿಂತಿರುಗುತ್ತವೆ. ಮರಿಗಳು ತೆಳ್ಳಗಿನ ಎಲೆಯ ಚಾಕುಗಳಂತೆ ಕಾಣುತ್ತಿರುತ್ತವೆ.

ಸಂತಾನೋತ್ಪತ್ತಿಯ ಬಳಿಕ ಇವುಗಳ ಶರೀರವು ಮಾರ್ಪಾಟುಗೊಂಡು ಹಾವಿನ ದೇಹದಾಕಾರ ಪಡೆದುಕೊಳ್ಳುತ್ತವೆ. ವಿಶೇಷವೆಂದರೆ ಒಂದು ಹೆಣ್ಣು ಈಲ್‌ಮೀನು ವರ್ಷವೊಂದರಲ್ಲಿ ಸುಮಾರು ನಾಲ್ಕು ದಶಲಕ್ಷ ಮೊಟ್ಟೆಗಳನ್ನು ಇಡುವ ಸಾಮರ್ಥ್ಯ ಹೊಂದಿರುತ್ತದೆ. ಮೊಟ್ಟೆಗಳು ಹಗುರವಾಗಿದ್ದು ನೀರಿನಲ್ಲಿ ತೇಲುತ್ತಿರುತ್ತವೆ. ಆಶ್ಚರ್ಯವೆಂದರೆ ಈ ಹೆಣ್ಣುಮೀನುಗಳು ಮೊಟ್ಟೆಯಿಟ್ಟ ನಂತರ ಸಾವನ್ನಪ್ಪುತ್ತವೆ.

ಇವು ಸಾಮಾನ್ಯವಾಗಿ ಚಳಿಗಾಲ ಅಥವಾ ವಸಂತಕಾಲದ ಆರಂಭದಲ್ಲಿ ಮೊಟ್ಟೆಗಳನ್ನಿಡುತ್ತವೆ. ಅಟ್ಲಾಂಟಿಕ್ ಸಾಗರದ ಸಾರ್ಗೋಸಾ ಸಮುದ್ರದಲ್ಲಿರುವ ಒಂದು ಜಾತಿಯ ಹಾವು ಮೀನುಗಳು ಸಾವಿರಾರು ಮೈಲುಗಳಷ್ಟು ದೂರದಲ್ಲಿರುವ ಯೂರೋಪಿನ ನದಿಗಳನ್ನು ಸೇರಿ ಅಲ್ಲಿ ಮೊಟ್ಟೆಯಿಟ್ಟು ಮರಿ ಮಾಡುವುದೂ ಇದೆ! ಅವುಗಳ ಮರಿಗಳು ಅಲ್ಲಿಯೇ ಬೆಳೆದು ಪ್ರಬುದ್ಧವಾಸ್ಥೆಗೆ ತಲುಪಿದ ಬಳಿಕ ಮತ್ತೆ ಮೂಲಸ್ಥಾನಕ್ಕೆ ಹಿಂದಿರುಗುತ್ತವೆ.

ಅಮೆರಿಕನ್ ಈಲ್ ಮೀನುಗಳಿಗೆ ಮಾರುಕಟ್ಟೆಯಲ್ಲಿ ತುಂಬಾ ಬೇಡಿಕೆ ಇದೆ. ಮೀನುಗಾರರಿಗೆ ಇದು ದೊಡ್ಡ ಆದಾಯ ಮೂಲವೂ ಹೌದು. ಸಾಗರ ತೀರ ಪ್ರದೇಶದ ಜನರು ಈ ಮೀನುಗಳ ರುಚಿ ಕಂಡುಕೊಂಡಿದ್ದಾರೆ. ರುಚಿಕರ ಮತ್ತು ಸ್ವಾದಿಷ್ಟ ಈಲ್ ಮೀನುಗಳಿಗೆ ಬಹುದೊಡ್ಡ ರಫ್ತು ಮಾರುಕಟ್ಟೆಯೂ ಇದೆ. ಅಂತರರಾಷ್ಟ್ರೀಯ ಬೇಡಿಕೆಯನ್ನು ಗಮನಿಸಿ, 2010ರಲ್ಲಿ ಈಲ್ ಮೀನುಗಳನ್ನು ಸೂಪರ್ ಮಾರುಕಟ್ಟೆಯಲ್ಲಿ ಮಾರಲು ಯೋಗ್ಯವಾದ ಆರೋಗ್ಯಕಾರಿ ಮೀನುಗಳ ಪಟ್ಟಿಗೆ ಸೇರಿಸಲಾಗಿದೆ.